# ಗಾಳಿ ಪಟ

GOVT. H. S. SCHOOL

KNOWLEDGE IS POWER

MOGRALPUTHUR

**ಜಿ ಎಚ್ ಎಸ್ ಎಸ್ ಮೊಗ್ರಾಲ್ ಪುತ್ತೂರು ಲಿಟಲ್ ಕೈಟ್ ಉತ್ಪನ್ನ**

# ಮುನ್ನುಡಿ

ಬರವಣಿಗೆಯನ್ನು ಕೈಗೊಂಡ ಹೊಸತರಲ್ಲಿ ಮುನ್ನುಡಿಯಂತು ಅಗತ್ಯ.ಕೈ ಕಟ್ಟಿಕುಳಿತರೆ ಏನು ಸಾಧ್ಯ. ಲಿಟಲ್ ಕೈಟ್ ಚಟುವಟಿಕೆಗಳ ಭಾಗವಾಗಿ ಮೂಡಿ ಬಂದ ಈ ಉತ್ಪನ್ನವು ನಮ್ಮ ಹಾಗೂ ನಮ್ಮ ಹಿರಿಯರ ನೈಜ ಕೈ ಕನ್ನಡಿ.ಈ ಪ್ರಕ್ರಿಯೆಗೆ ಯುವ ಲೇಖಕರಾಗಿ ನಾವು ನಮ್ಮಕೈಲಾದ ಕೊಡುಗೆಯನ್ನು ನಾವು ನೀಡಿದ್ದೇವೆ. ಹೀಗಾಗಿ ಯುವ-ಹೊಸದಾಗಿ ಬರೆವಣಿಗೆಯನ್ನು ಕೈಹಿಡಿದ ಬರಹಗಾರರಲ್ಲಿ ನಾವುಗಳು ನಮ್ಮ ಯೌವನವನ್ನೂ ಕಾಣುತ್ತೇವೆ.

ನಿಮ್ಮ ಹಾರೈಕೆಗಾಗಿ ಸಮರ್ಪಿಸುತ್ತಿದ್ದೇವೆ.

# ಪ್ರಳಯ ಬಂದ ಕಾಲ

ಅಂದು ನಾ ಕಂಡೆ ಸುಂದರ ಕೇರಳ

ಇಂದು ಅದಕ್ಕಾಗಿದೆ ತಳಮಳ

ಇದರಿಂದ ಜನಜೀವನ ಕಷ್ಟಕರ

ನನ್ನಲ್ಲಿ ಮೂಡಿತು ಬೇಸರ

ಜನರ ಸ್ವಾರ್ಥದಿಂದ ಈ ಅಪಾಯ

ಇದನು ಪರಿಹರಿಸಲೇನು ಉಪಾಯ

ಕೇಳಿರಿ ಆ ಉಪಾಯವನೀಗ

ಸ್ವಾರ್ಥತೆಯಿಂದ ದೂರವಾಗೋಣ ನಾವೀಗ

ಆಗಲಿ ಕೇರಳ ಪುನರ್ ನಿರ್ಮಾಣ

ಅದಕ್ಕಾಗಿ ನಾವೆಲ್ಲರು ಶ್ರಮಿಸೋಣ

ಪ್ರಳಯ ಮುಕ್ತ ಕೇರಳವನ್ನು ಮಾಡೋಣ

ಎಲ್ಲರಲ್ಲೂ ಸ್ನೇಹ ಬೆಳೆಸೋಣ

ಹೀಗೊಮ್ಮೆ ಆಯಿತು ಕೇರಳ ಅಲ್ಲೋಲಕಲ್ಲ

ಮುಂದೊಮ್ಮೆ ಬರಲಿದೆ ಒಲ್ಲೆಯ ಕಾಲ

ಬಂತು ಬೇಸಗೆಕಾಲ,ಚಳಿಗಾಲ,ಮಳೆಗಾಲ

ಇನ್ನು ಬರದು ನಮಗೆ ಬರಗಾಲ

# ದುರ್ಘಟನೆ

ಆ ಒಂದು ದುರ್ಘಟನೆ

ಕೊಚ್ಚಿಹೋಯಿತು ಮನೆಮಠ

ಪ್ರಕೃತಿ ಕಲಿಸಿದಳೊಂದು ಪಾಠ

ನಿಲ್ಲಲಿಲ್ಲ ಆ ಮಳೆಯ ಆರ್ಭಟ

ಆ ಒಂದು ಭೀಕರ ಮಳೆಗೆ

ಹಾಳಯಿತು ಬಾಳು  ತಿನ್ನಲೂ ಇಲ್ಲ ಒಂದು ಅಗಳು

ಉಳಿದಿರುವುದೊಂದೇ ಅಳು

ಮುಗಿಲು ಮುಟ್ಟಿತ್ತು ಆ ಕೂಗು

ಹಾನಿಯಾಗಿತ್ತು ಕೊಡಗು

ಧರಿಸಲೂ ಇಲ್ಲ ಒಂದು ಬಟ್ಟೆಯ

ಇರುವುದೊಂದೇ ಕುಟುಂಬವೆಂಬ ಅಸ್ತ್ರ

ಧಾವಿಸಿ ಬಂದರು ಜನರು

ಮಾನವೀಯತೆಯ ಮೆರೆದರು

ಧನ ಸಹಾಯವ ಮಾಡಿದರು

ಜಾತಿ ಮತವ ಮರೆತರು

ಪ್ರಳಯವನ್ನು ಹಿಮ್ಮೆಟ್ಟಿದರು

ಜನರ ಜೀವನವನ್ನು ಉಳಿಸಿದರು

ಮಾನವ ಜನ್ಮ ದೊಡ್ಡದೆಂದರು

# ನೋವಿನ ಸಾಗರ

ಸುಂದರ ನಾಡು ಸುಂದರ ಬೀಡು

ನಮ್ಮಯ ಸ್ವರ್ಗವೆ ಈ ತಾಯ್ನಾಡು

ಮರಗಳು ಗಿಡಗಳು ಹಣ್ಣು ಹೂಗಳು

ಎಲ್ಲೆಡೆ ಕಂಗೊಳಿಸುತ ಹಸುರೆಲೆಗಳು

ಪ್ರಕೃತಿಯ ಸೌಂದರ್ಯವನು ಸವಿಯೋಣ

ಸಂತೋಷದ ಬಾಳನು ಬಾಳೋಣ

ಎಂದು ಬದುಕನು ಹೇಳುವ ನಾವು

ನಡುವಲ್ಲುಂಟಾಯಿತು ಒಂದು ನೋವು

ರಭಸದ ಮಳೆಯು ಬೀಸುವ ಗಾಳಿಯು

ಎಲ್ಲರ ಮನದಲಿ ಭಯದ ಧಾಳಿಯು

ಭರಭರ ಹರಿಯುತ ನೀರು

ಮನಸಲಿ ಹುಟ್ಟಿತು ಒಂದು ಬೆರಗು

ಪ್ರಳಯದ ಆಟ ಸಾವಿರ ಸಂಕಟ

ಎಲ್ಲವೂ ನೀರಾದ ಪರದಾಟ

ಜೀವನ ಸಾಗರವೆಂಬ ರೈಲು

ಮುಂದೆ ಇರುವುದೆಲ್ಲ ನೀರು ಪಾಲು

# ಮಾನವ ಮತ್ತು ಪ್ರಕೃತಿ

ಪ್ರಕೃತಿ ಎಂದರೆ ಗಿಡ,ಮರ,ಬಳ್ಳಿ ತರುಲತೆಗಳಿಂದ ಹಚ್ಚ ಹಸಿರಾಗಿ ಕಂಗೊಳಿಸುವ ನಮ್ಮ ಭೂಮಾತೆ,ಜುಳು ಜುಳು ಹರಿವ ನದಿಗಳು ,ಬೆಟ್ಟ ಗುಡ್ಡ,ಗಿರಿಕಾನನಗಳು,ಕಾನನಗಳಲ್ಲಿರುವ ಹಸಿರು ಮರಗಳು,ಚಿಲಿಪಿಲಿ ಗುಟ್ಟುವ ಹಕ್ಕಿಗಳು,ಖಗಮಿಗಗಳು ಇವುಗಳನ್ನೆಲ್ಲಾ ನೋಡಲು ಎರಡು ಕಣ್ಣಗಳು ಸಾಲದು.

ಹಿಂದಿನ ಕಾಲದ ಹಿರಿಯರು ಪ್ರಕೃತಿಯನ್ನು ಅರಿತು ಬಾಳಿದವರು.ಪ್ರಕೃತಿಯೇ ನಮ್ಮ ದೇವರೆಂದವರು.ಅವರು ಸಾಂಪ್ರದಾಯಿಕ ಕೃಷಿಗಳನ್ನು ಮಾಡುತ್ತಿದ್ದರು.ಅದು ಹೆಚ್ಚು ಫಸಲು ಬಿಡದಿದ್ದರು ಆರೋಗ್ಯಕರವಾಗಿತ್ತುಅಲ್ಲದೆ ಹಿರಿಯರು ಶ್ರಮಜೀವಿಗಳಾಗಿದ್ದರು.

ಆದರೆ ಇಂದಿನ ತಾಂತ್ರಿಕ ಯುಗದಲ್ಲಿ ಪ್ರಕೃತಿಯನ್ನು ಶೋಷಣೆ ಮಾಡುವವರೇ ಹೊರತು ರಕ್ಷಿಸುವವರು ಕಡಿಮೆಯೇ.ಹಿಂದಿನಂತೆ ಇಂದು ಜನರು ಶ್ರಮಜೀವಿಯಾಗಿಲ್ಲ.ಬದಲಾಗಿ ಸೋಮಾರಿಯಾಗಿದ್ದಾರೆ.ಇಂದು ಎಲ್ಲರೂ ನಗರಗಳಲ್ಲಿ ಕೆಲಸ ಮಾಡುವವರೇ ಹೊರತು ಹೊಲಗದ್ದೆಗಳಲ್ಲ.

ಇಂದು ಮಾನವನು ಹಲವಾರು ರೀತಿಯಲ್ಲಿ ಪ್ರಕೃತಿಯನ್ನುಅತ್ಯಾಚಾರಗೈಯುತ್ತಿದ್ದಾನೆ.ನೆಲಮಾಲಿನ್ಯ,ಜಲಮಾಲಿನ್ಯ,ವಾಯುಮಾಲಿನ್ಯಗಳು ಪ್ರಕೃತಿಯನ್ನು ದಿನೇ ದಿನೇ ಹಿಂಸಿಸುತ್ತಿದೆ.ಹಿಂದೆಲ್ಲಾ ಕಾಡು ಎಂದರೆ ಸಂಪತ್ತಿಗೆ ಸಮಾನ.ಆದರೆ ಇಂದು ಜನರು ತಮ್ಮ ಸಂಪತ್ತಾದ ಕಾಡನ್ನು ಕಡಿದು ನಾಶ ಮಾಡುತ್ತಿದ್ದಾರೆ.ನಾಡು ನಗರಗಳಾಗುತ್ತಿವೆ.ಅಲ್ಲದೆ ಆಹಾರದ ಮೂಲವಾದ ಕೃಷಿ ಬಯಲನ್ನು ಮಣ್ಣು ಹಾಕಿ ಮುಚ್ಚಿ ಅಲ್ಲಿಯೂ ಫ್ಲಾಟ್,ಮನೆಗಳನ್ನು ಕಟ್ಟುತ್ತಿದ್ದಾರೆ.ಕಾರ್ಖಾನೆಗಳು ತಲೆಯೆತ್ತುತ್ತಿದೆ.

ಕಾರ್ಖಾನೆಗಳು,ವಾಹನಗಳು,ರೆಫ್ರಿಜರೇಟರ್ಗಳಿಂದ ಹೊರಬರುವ ಸಿ.ಎಫ್.ಸಿ ಗಳಿಂದಾಗಿ ಹಸಿರುಮನೆ ಅನಿಲಗಳು ಹೆಚ್ಚಾಗಿ ಜಾಗತಿಕ ಬಿಸಿಯೇರುವಿಕೆಯುಂಟಾಗುತ್ತದೆ.ಅಲ್ಲದೆ ಮಾನವರಿಗೆ ಹಲವಾರು ರೋಗಗಳು ಬರುತ್ತವೆ.ನೀರನ್ನು ಮಲಿನಗೊಳಿಸಿ ಆ ನೀರನ್ನು ಸೇವಿಸಿದರೆ,ನಿತ್ಯಕೆಲಸಗಳಿಗುಪಯೋಗಿಸಿದಾಗ ಅದರಿಂದ ಮಲೇರಿಯಾ,ಟೈಫಾಯ್ಡ್ ಗಳಂತಹ ಭಯಾನಕ ರೋಗಗಳು ಬರುವುದು. ಮಾನವರ ಹಸ್ತಕ್ಷೇಪದಿಂದಾಗಿ ಇಡೀ ವಿಶ್ವವೇ ತೊಂದರೆಗೀಡಾಗಿದೆ.ಸಮುದ್ರ ತಳದ ಅದ್ಭುತಗಳಲ್ಲೊಂದಾದ ಹವಳ ಬಂಡೆಗಳು ನಾಶವಾಗುತ್ತಿದೆ.ಕೆಲವು ಜೀವಿಗಳು ವಂಶನಾಶ ಹೊಂದಿವೆ.ಮಾನವನು ಪ್ರಕೃತಿಗೆ ಮಾಡಿದ ಶೋಷಣೆಗೆ ಪ್ರತಿಯಾಗಿ ಪ್ರಕೃತಿಯು ಮುನಿಸಿಕೊಂಡು ಜಲಪ್ರಳಯ,ಭೂಕಂಪ,ಅಗ್ನಿ ಪರ್ವತ ಸ್ಫೋಟ,ಭೂಕುಸಿತ ಮುಂತಾದ ಪ್ರಾಕೃತಿಕ ವಿಕೋಪಗಳುಂಟಾಗುತ್ತವೆ.

ಇದಕ್ಕೆ ನಾನು ನೀಡುವ ಸಲಹೆಗಳೇನೆಂದರೆ ಪ್ಲಾಸ್ಟಿಕ್ಗಳನ್ನು ಅಲಂಕಾರಿಕ ವಸ್ತುಗಳಾಗಿ ಉಪಯೋಗಿಸಬೇಕು.ಪ್ಲಾಸ್ಟಿಕ್ ಚೀಲದ ಬದಲು ಬಟ್ಟೆಚೀಲ ಉಪಯೋಗಿಸಬೇಕು.ಇ-ವೇಸ್ಟ್ ಗಳನ್ನು ಬೇರೆ ಸ್ಥಳಗಳಲ್ಲಿ ನಿಕ್ಷೇಪಿಸಬೇಕು.ಮರ,ಗಿಡಗಳನ್ನು ನೆಟ್ಟು ಬೆಳೆಸುವುದು.ಪ್ಲಾಸ್ಟಿಕ್ ಬಳಕೆಯನ್ನು ಕಡಿಮೆ ಮಾಡುವುದು.ಬನ್ನಿ ಸುಂದರ ಪ್ರಕೃತಿಯನ್ನುಕಾಪಾಡಿರಿ.

ಹಸಿರೇ ಉಸಿರು

# ಚುಕ್ಕೆಗಳೊಂದಿಗೆ ಗೆಳೆತನ

ಚುಕ್ಕೆಗಳೆಲ್ಲ ನೆಲಕೆ ಇಳಿದು

ಗೆಳೆಯರಾಗಿ ಬಿಟ್ರೆ

ಕತ್ತಲೆ ಹೆದರಿಕೆ ಇಲ್ಲವೆ ಇಲ್ಲ

ಕರೆಂಟು ಕೈ ಕೊಟ್ರೆ

ನಮ್ಮ ಜೊತೆಯಲಿ ದಿನವೂ ಬರಲಿ

ಶಾಲೆಯ ಯುನಿಫಾರ್ಮ ತೊಟ್ಟು

ಮನೆಮನೆಯಲ್ಲಿ ಉಳಿಸ್ಕೊತೀವಿ

ಪ್ರೀತಿ ಗೌರವ ಕೊಟ್ಟು

ಬೆನ್ನಿಗೆ ಬಾರದ ಚೀಲವ ಹೊತ್ತು

ಅರಿಯಲಿ ನಮ್ಮ ಕಷ್ಟ

ಕೂಡಿ ಆಡುತ ತೊರೆಯಲಿ ತಮ್ಮ

ತಾರಾಲೋಕದ ಪಟ್ಟ

ಶಾಲೆ ಮಕ್ಕಳ ಸಾಲಲಿ ನಿಂತು

ಮಾಡಲಿ ಮದ್ಯಾಹ್ನ ಊಟ

ಒರಟು ಕಲ್ಲಿನ ನೆಲದಲಿ ಕೂತು

ಕೇಳಲಿ ಮಾಸ್ತರ ಪಾಟ

ವಾರ್ಶಿಕ ಪರೀಕ್ಶೆಯಲ್ಲಿ ಕೂತು

ಗಳಿಸಲಿ ಹೆಚ್ಚಿನ ಅಂಕ

ಸ್ಪರ್ದೆಯಿಂದ ಕಸಿದುಕೊಳ್ಳಲಿ

ಗೆಳೆಯರ ಮೊದಲನೆ ರ್‍ಯಾಂಕ

ಅಂಕಿತ ಕೀಕಾನ

# ಆನೆ ಚಿಕ್ಕದಾಗಿ ಬಿಟ್ರೆ...



ಸೂಜಿಗಿಂತ ಚಿಕ್ಕದು ಬೇಕು
ಅಂಕುಶ ಮಾವುತಂಗೆ
ಹೇಳಿದಂಗ ಕೇಳಿಸಬಹುದು
ಅತ್ತಿತ್ತ ಓಡದಂಗೆ
ದಾರದೆಳೆಯಷ್ಟ ಕಾಣ್ಬಹುದಾಗ
ಚಿಕ್ಕ ಆನೆ ಸೊಂಡ್ಲು
ಎಳ್ಳಕಾಳಿನಷ್ಟ ಮಿಟಾಯಿ
ಚೂರು
ಕೊಡಬಹುದದಕೆ ತಿನ್ಲು
ಕಬ್ಬಿನ ಗಣಿಕೆ ಮುರದ ತಿನಲಿಕ್ಕೆ
ಬರದು ನೋಡು ಆಗ
ಚೂರ್ ಚೂರ್ ಬೆಲ್ಲ
ತಿಂದುತಿಂದು
ಬಿಡಬಹುದು ದೊಡ್ಡ ತೇಗ
ಎಂತ ಮಕ್ಳು ಹತ್ತಿ ಕೊಡ್
ಬೇಕ
ಪುಟಾಣಿ ಆನೆ ಮ್ಯಾಲ
ಕೂದಲೆಳೆಯಷ್ಟ ಚಿಕ್ಕದಿರಬೇಕ
ಎರಡೂ ಕೈಯಿ ಕಾಲ
ಇಂತ ಮಕ್ಳ ಶಾಲೆ ಆಗ
ಒಂದು ಎರಡೇ ಇಂಚು
ಸಾಸಿವೆ ಕಾಳಷ್ಟ ಎತ್ತರಿರತಾವು
ಕೂತುಕೊಳ್ಳುವ ಬೆಂಚು

# ಹಣೆಬರಹ

ಹೋಯ್ ಹೋಯ್... ಹುರ‍್ರಾ... ಎಂದು ಎತ್ತುಗಳನ್ನು ಹುರಿದುಂಬಿಸುತ್ತಾ, ಬಾಬಣ್ಣ ಬತ್ತದ ಹೊರೆ ತುಂಬಿದ ಎತ್ತಿನ ಗಾಡಿಯನ್ನು ಪ್ರಯಾಸದಿಂದ ನಡೆಸುತ್ತಿದ್ದ. ಎತ್ತುಗಳು ಬಾರವಾದ ಕಾಲುಗಳಿಂದ ಗಾಡಿ ಎಳೆಯುತ್ತಿದ್ದವು. ಹಗ್ಗದಿಂದ ಸೊಂಟಕ್ಕೆ ಕಟ್ಟಿದ್ದ ಚೊಣ್ಣವನ್ನು ಗಟ್ಟಿಯಾಗಿ ಹಿಡಿದು ಎದುರುಗಡೆಯಿಂದ ಬಸವ ಓಡೋಡಿ ಬರುತಿದ್ದ. ಕೈಯಲ್ಲಿ ಐದರ ಗಟ್ಟಿ ಬೀಳದಂತೆ ಬಿಗಿಯಾಗಿ ಹಿಡಿದಿದ್ದ. ಬಾಬಣ್ಣ ಅವನ ಅವಸರ ಕಂಡು “ಎಲ್ಲಿಗೆ ಓಡ್ತಿಯಲೇ...” ಎಂದ.

“ಬಾಬಣ್ಣ ಬಾಬಣ್ಣ... ಇವತ್ತು ಉಶಕ್ಕಗೆ ನೋಡಕ್ಕ ಬರ‍್ತವರಣ್ಣೋ. ಅದಕ್ಕೆ ಶರಬತ್ತು ಮಾಡಕ್ಕೆ ನಿಂಬೆಹಣ್ಣು ತರಕ್ಕೆ ಕಾಕನಂಗಡಿಗೆ ಹೋಗ್ತೀವ್ನಿ” ಎಂದ ಬಸವ.

“ಹೌದ? ಹ್ಮಂ.. ಹೋಗೋಗು ಬೇಗನೆ ಬಾ”.

ಪಾಪ ಉಶಾನೂ ಮದುವೆ ವಯಸ್ಸಿಗೆ ಬಂದು ಬಹಳ ವರ‍್ಶ ಆಯ್ತು. ನೋಡೋಕೆ ಬರೋ ಪುಣ್ಯಾತ್ಮ ಒಳ್ಳೆಯವನಿದ್ದರೆ ಸಾಕು. ಉಶಾ ನನ್ನ ದೊಡ್ಡಪ್ಪನ ಮಗಳಾದರೂ ಸ್ವಂತ ತಂಗಿ ತರಾನೆ ಇದಾಳೆ. ಇಬ್ಬರದ್ದು ಒಂದೇ ವಯಸ್ಸು, ಸಣ್ಣವರಿದ್ದಾಗಿನಿಂದ್ಲೂ ಕೂಡಿ ಆಡಿ ಬೆಳೆದವರು. ನನಗೂ ಅವಳಿಗೂ ಆರೇ ತಿಂಗಳು ವ್ಯತ್ಯಾಸ. ನಾನಾಗಲೇ ಮದುವೆಯಾಗಿ ಎರಡು ಮಕ್ಕಳ ತಂದೆ. ಆಗ್ಲಿ, ಆಗ್ಲಿ... ದೇವರ ದಯೆಯಿಂದ ಈ ಸಂಬಂದ ಗಟ್ಟಿಯಾಗ್ಲಿ ಎಂದುಕೊಳ್ಳುತ್ತಾ, ಬಾಬಣ್ಣ ಎತ್ತನ್ನು ಹೋಯ್ ಹೋಯ್ ಎಂದು ಹುರಿದುಂಬಿಸುತ್ತ ಹಳ್ಳದ ಬದಿಯ ಬಂಡಿ ಜಾಡಿನಲ್ಲಿ ಸಾಗುತಿದ್ದ.

ಇತ್ತ ಉಶಾಳ ಕಾಲು ಮಾತ್ರ ನೆಲದ ಮೇಲೆ ನಿಲ್ಲುತ್ತಿಲ್ಲ. “ನನ್ನ ನೋಡಕ್ಕೆ ಬರೋ ಸುರಸುಂದರಾಂಗ ಹೆಂಗಿದಾನೋ... ನನ್ನ ಮದುವೆ ಆದ್ರೆ ಚೆನ್ನಾಗಿ ನೊಡ್ಕಂಡಾನ? ಅವನೆಲ್ಲೋ ಪಟ್ಟಣದಾಗಿದಾನಂತೆ, ನನ್ನಂತ ಹಳ್ಳಿ ಮುಕ್ಕಿಗೆ ಚೆನ್ನಾಗಿ ನೋಡ್ಕಂಡಾನ... ಮೊಗೆ ಮೊಗೆದು ತೆಗೆದಶ್ಟು ತುಂಬೋ ಕಾಲುವೆ ನೀರ ತರಹ ಕಾಲಿಯಾಗಲಾರದಶ್ಟು ಪ್ರೀತಿ ಕೊಟ್ಟಾನ?”. ಅವಳ ಮನಸ್ಸು ಹಕ್ಕಿಯಂತೆ ಗಾಳಿಯಲ್ಲಿ ತೇಲುತ್ತಿದೆ. ಕಣ್ಣುಗಳಲ್ಲಿ ಆಸೆ ಚಿಗುರೊಡೆದು ಏನನ್ನೋ ಹುಡುಕುತ್ತಿವೆ. ನಿಂತಲ್ಲಿ ನಿಲ್ಲಲಾರಳು, ಕುಂತಲ್ಲಿ ಕೂರಲಾರಳು. ಅವ್ವ ಕೆಳಗೆ ಹೆಗ್ಗಡೆರ ಗದ್ದೆಗೆ ಹೋಗವಳೆ. ಗಂಡಿನ ಕಡೆಯವರು ನೋಡಕ್ಕೆ ಬರ‍್ತೀನಿ ಅಂದವರಲ್ಲ, ಅದಕ್ಕೆ ಹೇಳಕೊಂಡು ಬೇಗನೆ ಬರ‍್ತೀನಿ ಅಂತ ಹೋಗವಳೇ. ಅಪ್ಪ ಇದ್ದಿದ್ರೆ ಇವತ್ತು ಸಂಬ್ರಮದಿಂದ ಓಡಾಡಿರೋನು. ಅಪ್ಪನ ನೆನೆದು ಅವಳ ಕಣ್ಣಾಲಿಗಳು ತುಂಬಿ ಬಂದವು. ಸಾವರಿಸಿಕೊಂಡು ಗಂಡಿನ ಕಡೆಯವರು ಸಾಯಂಕಾಲ ನಾಲ್ಕು ಗಂಟೆಗೆ ಬರ‍್ತೀವಿ ಅಂದವರೆ. ಈಗಿನ್ನೂ

ಎಂದು ಲಗುಬಗೆಯಿಂದ ತಲೆ ಮೇಲೆ ಬುಟ್ಟಿ ಹೊತ್ತು, ಹಳ್ಳದ ಕಡೆಗೆ ಮನಸ್ಸಿನ ತುಂಬ ಆಸೆ ಹೊತ್ತು ನಡೆದಳು.

ಜುಳು ಜುಳು ಹರಿಯುವ ಸ್ವಚ್ಚ ನೀರಿನಲ್ಲಿ ಮುಕವ ಕಂಡು ನಾಚುತ್ತಿದ್ದಳು. ನನ್ನ ಕಟ್ಟಿಕೊಳ್ಳುವ ಸರದಾರ ಪಕ್ಕದಲ್ಲಿ ಕುಳಿತಂತೆ, ಬೊಗಸೆಯಲಿ ಮೊಗವೆತ್ತಿ ಚುಂಬಿಸಿದಂತೆ, ಮೊಗದ ಮೇಲೆ ಹೊಯ್ದಾಡೋ ಮುಂಗುರುಳ ಸರಿಸಿ, ಕಣ್ಣಲ್ಲಿ ಕಣ್ಣಲ್ಲಿ ಕಣ್ಣಿಟ್ಟು ಏನೋ ಕೇಳಿದ ಹಾಗೆ... ಅವಳು ಈ ಲೋಕದಲ್ಲಿ ಇಲ್ಲವೆ ಇಲ್ಲ!

ಎದುರಿನ ಒತ್ತಾದ ಪೊದೆಯೊಳಗೆ ಏನೋ ಸರ ಸರ ಸದ್ದು. ಅತ್ತಿತ್ತ ಹೊರಳುವ ಕಣ್ಣು ಉಶೆಯ ಮೇಲೆ ನೆಟ್ಟಿದೆ. ಹಸಿವಿನಿಂದ ಮೈಯೆಲ್ಲ ಆಕ್ರೋಶ ತುಂಬಿಕೊಂಡ ಒಂಟಿಸಲಗ ನಿನ್ನೆ ಕೆಳಗದ್ದೆಯ ಹೆಗ್ಗಡೆಯವರ ಬತ್ತದ ಗದ್ದೆಗಿಳಿದು ಧ್ವಂಸ ಮಾಡಿತ್ತು. ಕೆಳಗದ್ದೆ ಊರವರೆಲ್ಲ ಸೇರಿ ಮದ್ದು-ಗಂಡು, ಪಟಾಕಿ, ತಮಟೆಯ ಸದ್ದು ಮಾಡಿ ಈ ಒಂಟಿ ಸಲಗವನ್ನು ಕಾಡಿಗಟ್ಟೋ ಪ್ರಯತ್ನ ಮಾಡಿದ್ದರು. ಇದರಿಂದ ಒಂಟಿ ಸಲಗ ಮತ್ತಷ್ಟು ವ್ಯಗ್ರವಾಗಿದ್ದ . ಉಶೆಗೂ ಸಲಗವಿರುವ ಪೊದೆಗೂ ನಾಲ್ಕು ಮೀಟರ್ ಮಾತ್ರ ಅಂತರ. ಮೊದಲೇ ವ್ಯಗ್ರವಾಗಿದ್ದ ಸಲಗ ಮನುಶ್ಯರನ್ನು ಕಂಡು ಮತ್ತಶ್ಟು ಉಗ್ರವಾಯ್ತು. ದಾಪುಗಾಲಿನ ಹೆಜ್ಜೆ ಇಡುತ್ತ ಪೊದೆಯಿಂದ ದುತ್ತನೆ ತನ್ನೆದುರಿಗೆ ಬಂದು ನಿಂತ ಸಲಗವ ಕಂಡು ಕನಸಿನ ಲೋಕದಲಿ ವಿಹರಿಸುತ್ತಿದ್ದ ಉಶೆ ಜರ್ರನೆ ದರೆಗಿಳಿದು ಬಂದಳು. ಜಂಗಾ ಬಲವೇ ಉಡುಗಿ ಹೋಯ್ತು. ತನ್ನೆಲ್ಲ ಶಕ್ತಿ ಕ್ರೋಡೀಕರಿಸಿ, ಎದ್ದು ನಾಲ್ಕು ಹೆಜ್ಜೆ ಓಡುವಶ್ಟರಲ್ಲಿ ಸಲಗದ ಸೊಂಡಿಲಿನಲ್ಲಿ ಮುದ್ದೆಯಾದಳು. ಸಲಗದ ಕಾಲಿನ ಹೊಸೆತಕ್ಕೆ ಸಿಕ್ಕು ಅಪ್ಪಚ್ಚಿಯಾದಳು. ಕಂಡ ಕನಸೆಲ್ಲ ಕ್ಶಣಾರ್ದದಲ್ಲಿ ಮಣ್ಣಲ್ಲಿ ಮಣ್ಣಾಗಿ ಮಸಣ ಸೇರಿತ್ತು.

ಹಳ್ಳದ ಬಂಡಿ ಜಾಡಿನಲ್ಲಿ ಬಂದ ಬಾಬಣ್ಣ ಉಶೆಯ ದೇಹ ಚಿದ್ರವಾಗಿ ಬಿದ್ದಿದ್ದನ್ನು ಕಂಡು ನೋವಿನಿಂದ ಚೀರಿಕೊಂಡ. ಅಯ್ಯೋ ಕ್ರೂರ ವಿದಿಯೇ ಎಂದು ಮನಸಾರೆ ಬೈಯತೊಡಗಿದ. ಬಸವ ನಿಂಬೆಹಣ್ಣು ಕೊಂಡು ಹಿಂತಿರುಗುತ್ತಿದ್ದಾಗ ಬಾಬಣ್ಣನ ಚೀರಾಟ ಕಂಡು ಅತ್ತ ಓಡಿದ. ಅಕ್ಕನ ಸಾವನ್ನು ಕಂಡು ಕಣ್ಣೀರ ದಾರೆಯೊಂದಿಗೆ ದರೆಗೆ ಕುಸಿದ, ಕೈಯೊಳಗಿನ ನಿಂಬೆಹಣ್ಣು ಉರುಳಿ ಅಕ್ಕನ ರಕ್ತ ಸಿಕ್ತ ಕೆನ್ನೆ ಮುಟ್ಟುತ್ತಿದ್ದವು. ಮಾನವ ಬಯಸುವುದು ಒಂದಾದರೆ ಆಗುವುದು ಮತ್ತೊಂದು. ಇದೇ ವಿದಿಯಾಟ. ನೋಡ ಬಂದ ಗಂಡಿನ ಕಡೆಯವರು ಉಶೆಯ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಂಡು ಬಾರವಾದ ಹೆಜ್ಜೆ ಹಾಕಿದರು.

# ನನ್ನ ಸ್ಫೂರ್ತಿಯ ಚಿಲುಮೆ

ಸಂಜೆ ಆರು ಗಂಟೆಯಾದರೂ ನಾನಿನ್ನೂ ಲ್ಯಾಬ್‌ನಲ್ಲಿಯೇ ಇದ್ದೆ. ಇನ್ನೇನು ಹೊರಡಬೇಕು ಎನ್ನುವಷ್ಟರಲ್ಲಿ ಮೊಬೈಲ್ ರಿಂಗಣಿಸಿತು. ನೋಡಿದರೆ ಅದು ಗೆಳೆಯ ವಿನೀತನ ಕರೆ. ಉಳಿದ ಅಲ್ಪ ಸ್ವಲ್ಪ ಕೆಲಸಗಳನ್ನು ಮುಗಿಸಿ ಹೊರಡುವ ಅವಸರದಲ್ಲಿ ಇದ್ದಿದ್ದರಿಂದ ಫೋನ್ ಕಟ್ ಮಾಡಿದೆ. ಕೆಲಸ ಮುಗಿಸಿ ಬಸ್ ಸ್ಟಾಪ್‌ನತ್ತ ನಡೆಯುತ್ತಾ ಅವನಿಗೆ ಕೊಂಚ ಆತಂಕದಲ್ಲೇ ಫೋನ್ ಮಾಡಿದೆ. ಕಾರಣ ವಿನೀತನ ಪತ್ನಿ ಗರ್ಭಿಣಿ. ಏನಾದರೂ ತೊಂದರೆ…? ಏನೇನೋ ವಿಚಾರಗಳು ಬರತೊಡಗಿದವು. ಅಷ್ಟರಲ್ಲಿ ಕರೆ ಸ್ವೀಕರಿಸಿದ ವಿನೀತ್, "ನಾಳೆ ರವಿವಾರ ಫ್ರೀ ಇದ್ದರೆ ಮನೆಗೆ ಬಾ" ಎಂದ. ಮನೆಗೆ ಬರಲು ಕಾರಣ ಏನೆಂದು ಕೇಳಿದೆ. ಯಾವ ತೊಂದರೆಯೂ ಇಲ್ಲವೆಂದ ಆತ ನನ್ನ ಪತ್ನಿ ಸ್ಫೂರ್ತಿಯನ್ನೂ ಕರೆತರಲು ತಿಳಿಸಿದ. "ಆಯಿತು" ಅಂದೆ.

ವಿನೀತ್ ಯುವ ಅಡ್ವೋಕೇಟ್. ನನ್ನ ಬಿ.ಎಸ್ಸಿ. ಸಹಪಾಠಿ ಹಾಗೂ ಸಮಾನ ಮನಸ್ಕ ಸ್ನೇಹಿತ. ಬಿ.ಎಸ್ಸಿ. ನಂತರ ಆತ ಫೋರೆನ್ಸಿಕ್ ಸೈನ್ಸ್, ನಾನು ಬಯೊಟೆಕ್ನಾಲಜಿ ಆಯ್ಕೆ ಮಾಡಿಕೊಂಡೆವು. ನಾವಿಬ್ಬರೂ ಆಗಾಗ ನಮ್ಮ ವಿಬಾಗ, ವಿಶಯಗಳ ಕುರಿತು ಗಂಟೆಗಟ್ಟಲೇ ಮಾತನಾಡುತ್ತಿದ್ದೆವು. ಪರಸ್ಪರ ಮಾಹಿತಿ ಹಂಚಿಕೊಳ್ಳುವುದು ನಮ್ಮ ಹವ್ಯಾಸವಾಗಿತ್ತು. ನಂತರ ಆತ ಎಲ್.ಎಲ್.ಬಿ. ಕೋರ್ಸ್ ಸೇರಿಕೊಂಡ ನಾನು ಪಿ.ಎಚ್.ಡಿ. ಎಂದು ಪ್ರಯೋಗಾಲಯ ಸೇರಿಕೊಂಡೆ. ಇತ್ತೀಚೆಗೆ ಆತನೊಂದಿಗೆ ಕಾಲ ಕಳೆಯುವುದೂ ಅಪರೂಪವಾಗಿತ್ತು. ಆತನ ಪತ್ನಿ ಸಂಧ್ಯಾ ವೈದ್ಯೆ. ಇವನ ತಂದೆ-ತಾಯಿಯರನ್ನೂ ಬೇಟಿಯಾಗದೇ ಬಹಳ ದಿನಗಳಾಗಿದ್ದವು.

ಮಾರನೆ ದಿನ ನಾವಿಬ್ಬರೂ ಮದ್ಯಾಹ್ನದ ಹೊತ್ತಿಗೆ ಅವರ ಮನೆಗೆ ಹೋದೆವು. ಉಬಯ ಕುಶಲೋಪರಿಯ ಬಳಿಕ ವಿನೀತನ ತಾಯಿ ನಮ್ಮನ್ನೆಲ್ಲ ಊಟಕ್ಕೆ ಕರೆದರು. ವಿನೀತ್ ಎಂದಿನಂತಿರಲಿಲ್ಲ. ಊಟದ ನಂತರ ಎಲ್ಲರೂ ಮಾತಾಡುತ್ತಾ ಕುಳಿತರು. ವಿನೀತ್ ನನ್ನನ್ನು ಮೇಲಿನ ಕೋಣೆಗೆ ಕರೆದೊಯ್ದ. ನಾವಿಬ್ಬರೂ ಬೇಟಿಯಾದಾಗಲೆಲ್ಲ ತನ್ನ ವಕೀಲಿಕೆ ವೃತ್ತಿಯಲ್ಲಿ ಕಂಡ ವಿಬಿನ್ನ ವಕೀಲರು, ವಿಚಿತ್ರ ಕಕ್ಷಿದಾರರ ಕುರಿತ ಸ್ವಾರಸ್ಯಕರ ಕತೆಗಳನ್ನು ಹೇಳುತ್ತಿದ್ದ. ಆತ ಒಳ್ಳೆಯ ಮಾತುಗಾರ ಬೇರೆ! ನಾನು 'ನನ್ನ ಹೆಂಡತಿಯೊಟ್ಟಿಗೆ ಹೋದ ಊಟಿ ಪ್ರವಾಸ, ನನ್ನ ಅಕ್ಕನ ಮದುವೆ' – ಎಂದು ಮಾತಿಗಾರಂಬಿಸಿದರೂ,

ಈತನ ಬಾಯಿಂದ "ಹೂಂ" ಬಿಟ್ಟರೆ ಬೇರೆ ಮಾತೇ ಇಲ್ಲ. ಕೊನೆಗೆ, ನನಗೆ ಹೆಚ್ಚು ಸಮಯ ಇಲ್ಲವೆಂದೂ, ಏನಾದರೂ ಸಮಸ್ಯೆ ಇದ್ದಲ್ಲಿ ಸಹಾಯ ಬೇಕಾದರೆ ಸಂಕೋಚವಿಲ್ಲದೆ ಹೇಳಬೇಕೆಂದು ಒತ್ತಾಯಿಸಿದೆ. ಆದದ್ದು ಇಷ್ಟೇ – ಕೆಲವು ದಿನಗಳ ಹಿಂದೆ ದಂಪತಿಗಳಿಬ್ಬರು ಇವನಲ್ಲಿಗೆ ವಿಚ್ಚೇದನ ಪಡೆಯಲು ಬಂದಿದ್ದರು. ಈತನ ಸಲಹೆಯ ಮೇರೆಗೆ ಹೊಂದಾಣಿಕೆಯಿಂದಿರಲು ಪ್ರಯತ್ನಿಸಿದ ಇಬ್ಬರೂ ಅದು ಸಾದ್ಯವಾಗದೇ, ಬೇರ್ಪಡಲು ತೀರ್ಮಾನಿಸಿದ್ದರು. ಆಕೆ ಗಾಯಕಿ; ಗಂಡ ವರ್ತಕ. ಹೆಂಡತಿಯ ಏಳಿಗೆ ಸಹಿಸದೇ ಈ ನಿರ್ಧಾರಕ್ಕೆ ಬಂದಿರುವುದನ್ನು ಆ ವ್ಯಕ್ತಿಯೇ ವಕೀಲರಲ್ಲಿ ಹೇಳಿಕೊಂಡಿದ್ದನಂತೆ. ಅವರಿಗಿಬ್ಬರು ಮಕ್ಕಳು. ಅದೂ ಅಲ್ಲದೇ ವಿಚ್ಚೇದನದ ನಂತರ ಮಗ ಹಾಗೂ ಮಗಳನ್ನು ಯಾರು ನೋಡಿಕೊಳ್ಳಬೇಕೆಂಬುದು ಇನ್ನೊಂದು ಸಮಸ್ಯೆ.

ಬೇರೆ ಸಮಯವಾಗಿದ್ದರೆ ವಿನೀತ್ ಇಷ್ಟೊಂದು ಚಿಂತಿಸುತ್ತಿರಲಿಲ್ಲ. ತಮ್ಮವರೇ ಯಾರೋ ಬೇರ್ಪಟ್ಟಂತೆ, ಅವರ ಮಕ್ಕಳ ಬವಿಶ್ಯದ ಬಗ್ಗೆ ಚಿಂತಿಸುತ್ತಿದ್ದ. ದೊಡ್ಡಮಗಳು ಎರಡನೇ ತರಗತಿ; ಚಿಕ್ಕ ಮಗುವಿಗೆ ಮೂರು ವರ್ಶ. ಹೆಂಗರುಳಿನ ಮಿತ್ರ ಯಾರದೋ ಮನೆಯ ಸಮಸ್ಯೆಯನ್ನು ಇಶ್ಟು ಗಂಬೀರವಾಗಿ ತೆಗೆದುಕೊಂಡಿದ್ದು ನನಗೆ ಅಚ್ಚರಿಯೆನಿಸಿತ್ತು.

ನಾನೆಂದೆ – "ಆ ವ್ಯಕ್ತಿಯೊಡನೆ ಆತನ ಹೆಂಡತಿಯ ಪ್ರವೃತ್ತಿ, ಮಕ್ಕಳ ಬವಿಶ್ಯದ ಕುರಿತು ಚರ್ಚಿಸಿದರೆ ಆಗದೇ?" ಅದಕ್ಕವನು "ಎಲ್ಲ ಪ್ರಯತ್ನಗಳೂ ಆದವು" ಅಂದ. ಇವನಿಗೆ ತಂದೆ-ತಾಯಿಯ ಜವಾಬ್ದಾರಿ, ಹೆಂಡತಿಯ ಆರೋಗ್ಯ, ತನ್ನ ಕೆಲಸ ಅಶ್ಟೇ ಅಲ್ಲದೇ ಈಗ ಸಂಧ್ಯಾಳನ್ನು ರೋಗಿಗಳ ಮನೆಗೆ, ಆಸ್ಪತ್ರೆಗೆ ಕರೆದೊಯ್ಯುವುದು... ಇವುಗಳ ಮದ್ಯ ಇನ್ನೊಬ್ಬರ ಮನೆಯ ಉಸಾಬರಿ ಯಾಕೆ ಬೇಕು ಅಂತ ನನಗೆನಿಸಿತು. ನನ್ನ ತಾಳ್ಮೆ ಮುಗಿಯತೊಡಗಿತ್ತು. ಕೊನೆಯದಾಗಿ ನಾನೇನು ಮಾಡಬೇಕೆಂದೆ. ಆತ "ಇದಕ್ಕೆ ನೀನೇ ಒಂದು ಪರಿಹಾರ ..." ಎನ್ನುತ್ತಿದ್ದಂತೆ, ನನಗೆ ಸಹನೆ ಮೀರಿ, "ನಾನು ನನ್ನ ಸಂಶೋದನೆ, ಸಂಸಾರ, ಇತ್ಯಾದಿಗಳಿಗೇ ಸಮಯ ನೀಡಲು ಅಸಾದ್ಯ. ಹಾಗೂ ನನಗೆ ಈ ವಿಶಯದಲ್ಲಿ ಕಿಂಚಿತ್ತೂ ಆಸಕ್ತಿ ಇಲ್ಲ" ಎಂದು ನೇರವಾಗಿ ಹೇಳಿದೆ. ಆದರೂ ತನ್ನೆಲ್ಲ ತಾಪತ್ರಯಗಳ ಮದ್ಯೆ ಇವನು ಅವರ ಕುರಿತು ಚಿಂತಿಸುವುದನ್ನು ಕಂಡು ಮರುಕ ಹುಟ್ಟಿತು.

ಸಂಜೆ ಮನೆಗೆ ಬಂದು ಪ್ರೆಶ್ ಆಗಿ ನನ್ನ ಕೆಲಸದಲ್ಲಿ ತೊಡಗಿಕೊಂಡೆ. ಯಾಕೋ ವಿನೀತನ ಮಾತುಗಳೇ ನೆನಪಾದವು. ಜೊತೆಗೆ ನನ್ನ ತಪ್ಪುಗಳೂ...

ವಾರದ ಹಿಂದೆ ನನ್ನವಳು ತನ್ನದೊಂದು ಪೇಂಟಿಂಗ್ ಎಗ್ಸಿಬಿಶನ್ ಮಾಡಬೇಕು ಎಂದಿದ್ದಳು. ಆಗೊಮ್ಮೆ ಈಗೊಮ್ಮೆ ಪೇಂಟಿಂಗ್ ಮಾಡಿ ಮನೆಯ ಗೋಡೆ, ವರಾಂಡ, ಸ್ವಿಚ್ ಬೋರ್ಡ್, ಬಾಗಿಲಿಗೆ ಹಾಕಿದ ಪರದೆ – ಹೀಗೆ ಎಲ್ಲದರ ಮೇಲೂ ಏನಾದರೊಂದು ಬರೆದು, ಬಣ್ಣ ತುಂಬಿ ಎಲ್ಲರಿಗೂ ತೋರಿಸಿ ಕುಶಿಪಡುತ್ತಿದ್ದಳು. ನಾನು ಮಾತ್ರ ಆಕೆ ಚಿತ್ರಕಲೆಯನ್ನು ಅಷ್ಟು ಸೀರಿಯಸ್ ಆಗಿ ತೆಗೆದುಕೊಂಡಿರಬಹುದೆಂದು ಊಹಿಸಿಯೂ ಇರಲಿಲ್ಲ. ಇದ್ದಕ್ಕಿದ್ದಂತೆ ಚಿತ್ರಕಲೆ ಪ್ರದರ್ಶನ ಎಂದಾಗ ಅವಳ ಮೇಲೆ ಹಾಗೆ ಕೂಗಾಡಬಾರದಿತ್ತು. ಚಿಕ್ಕ ಜಗಳದ ನಂತರ ಆಕೆಯೊಂದಿಗೆ ಮಾತಾಡದೇ ಮೂರ್ನಾಲ್ಕು ದಿನಗಳಾಗಿದ್ದವು. ಆದರೂ ನಾನು ಕರೆದಾಗ ಒಲ್ಲದ ಮನಸ್ಸಿನಿಂದಲೇ ನನ್ನೊಂದಿಗೆ ವಿನೀತನ ಮನೆಗೆ ಬಂದಿದ್ದಳು. ಅದೇನೋ 'ಕ್ಯಾನ್‌ವಾಸ್, ಅಕ್ರಿಲಿಕ್….' ಎನ್ನತೊಡಗಿದಳು. ವಿನೀತ್ ಹೇಳಿದ್ದೆಲ್ಲವನ್ನೂ ಆಕೆಗೆ ಹೇಳಬೇಕೆಂದುಕೊಂಡೆ. ಆದರೆ ನಾನೂ ಆ ಕಕ್ಕೈದಾರನಂತೆ ನನ್ನ ಪತ್ನಿ ಸ್ಫೂರ್ತಿಯ ಕಲೆಗೆ ಪ್ರೋತ್ಸಾಹ ನೀಡದೇ ಆಕೆಯನ್ನು ಹೀಯಾಳಿಸುತ್ತಿದ್ದುದು ನೆನಪಾಗಿ ತೆಪ್ಪಗಾದೆ. ನನಗೆ ಕಸಿವಿಸಿಯಾಗುತ್ತಿರುವುದನ್ನು ಗಮನಿಸಿದ ಆಕೆ ಮೌನವಾದಳು. ಈ ಬಾರಿ ಸುಮ್ಮನಿರಲು ಸಾದ್ಯವಾಗದೇ ವಿನೀತ ಹೇಳಿದ್ದೆಲ್ಲವನ್ನೂ ಒಂದೊಂದಾಗಿ ಹೇಳತೊಡಗಿದೆ. ಆಕೆ ಎಲ್ಲವನ್ನೂ ಕತೆಯಂತೆ ಕೇಳಿಸಿಕೊಂಡು 'ಗುಡ್‌ನೈಟ್' ಹೇಳಿ ಮಲಗಿಯೇಬಿಟ್ಟಳು! ನಾನೂ ಮೂರ್ಕನಂತೆ 'ಗುಡ್‌ನೈಟ್' ಹೇಳಿ ಅವಳನ್ನೇ ನೋಡುತ್ತಾ ಮಲಗಿದೆ.

ಕೆಲವು ದಿನಗಳ ನಂತರ ವಿನೀತ್ ಮತ್ತೆ ಕರೆ ಮಾಡಿದಾಗ ಆತ ಬಹಳ ಕುಶಿಯಾಗಿರುವಂತೆ ಕಂಡಿತು. "ಸಂಜೆ ಮನೆ ಬರುತ್ತೇನೆ" ಅಂದ. ಸಮ್ಮತಿಸಿದೆ. ಸಂಜೆ ಸಮಯ. ಅದೂ ಇದೂ ತಿನ್ನುತ್ತಾ ಆ ವಿಚ್ಚೇದನದ ಪ್ರಕರಣದ ಬಗ್ಗೆ ಹೇಳತೊಡಗಿದ. ನಾನಂತೂ ಅವನಿಗೆ ಏನೂ ಸಹಾಯ ಮಾಡಲಾಗಿರಲಿಲ್ಲ. ಆದರೆ ಇಂದು ಆತನ ಮಾತುಗಳನ್ನು ತಾಳ್ಮೆಯಿಂದ ಕೇಳತೊಡಗಿದೆ. ಆ ಕಕ್ಕೈದಾರನ ಮನೆಗೆ ಇವನು, ಸಂಧ್ಯಾ ಹೋಗಿದ್ದರಂತೆ. ಇವರನ್ನು ಕಂಡ ದಂಪತಿ ಆದರದಿಂದ ಬರಮಾಡಿಕೊಂಡು, ಆದಷ್ಟು ಬೇಗ ಎಲ್ಲವನ್ನೂ ಮುಗಿಸಿಬಿಡಬೇಕು ಎಂದರಂತೆ. ಇವರ ಮಾತಿನ ಮದ್ಯೆ ಅಲ್ಲಿಗೆ ಬಂದ ಅವರ ಮಗನನ್ನು ಡಾ. ಸಂಧ್ಯಾ ಆಡಿಸತೊಡಗಿದರು. ವಿನೀತ್ ಅವರ ದಾಕಲೆಗಳನ್ನು ಪಡೆದು ಎಲ್ಲವೂ ಇತ್ಯರ್ಥವಾಗುವುದೆಂದು ಹೇಳಿ ಇಬ್ಬರೂ ಹೊರಡಲು ಅಣಿಯಾಗುತ್ತಿದ್ದಂತೇ ಆ ಮನೆಯ ಸೊಸೆ ಸಂಧ್ಯಾಳಿಗೆ ಕುಂಕುಮ ನೀಡಿ ಉಡಿ ತುಂಬಲು ಬಂದಳಂತೆ.

ಆದರೆ ಸಂಧ್ಯಾ ನಿರಾಕರಿಸಿದಾಗ ಅವರ ಮನೆಯವರಿಗೆ ಸಿಟ್ಟು, ಬೇಸರ ಬಂದು ಕೊಂಚ ಒತ್ತಾಯಿಸಿದಾಗಲೂ ಸಂಧ್ಯಾ ಕುಂಕುಮ ಪಡೆಯದೇ

ಪ್ರಯಾಸಪಟ್ಟು ಎದ್ದು ಹೊರಡುವಾಗ ಆ ಮನೆಯಾಕೆ ಇದು ಅಶುಬವೆಂದೂ,ತುಂಬಿದ ಗರ್ಬಿಣಿ ಇದನ್ನೆಲ್ಲ ನಿರಾಕರಿಸುವುದು ಶ್ರೇಯಸ್ಸಲ್ಲವೆಂದೂ

ಹೇಳಿದಾಗ, ಸಂಧ್ಯಾ "ಇನ್ನು ಕೆಲವೇ ದಿನಗಳಲ್ಲಿ ನೀವೂ ಇವೆಲ್ಲವನ್ನೂ ಕಳೆದುಕೊಳ್ಳಲಿದ್ದೀರಿ. ಹೀಗಿರುವಾಗ ನಿಮ್ಮಿಂದ ಹೇಗೆ ಕುಂಕುಮ ಪಡೆಯಲಿ?" ಎಂದು ಕೇಳಿದಾಗ, ಆಕೆ ದುಕ್ಕ ತಡೆಯಲಾರದೇ ಅಲ್ಲಿಂದ ಓಡಿ ಕೊಟಡಿ ಸೇರಿಕೊಂಡು ಜೋರಾಗಿ ಅಳಲಾರಂಬಿಸಿದಾಗ ಅವಳ ಮಗು ಬೆದರಿ, ಸಂಧ್ಯಾಳ ಕೈಯಿಂದ ಬಿಡಿಸಿಕೊಂಡು ಅಮ್ಮನ ಬಳಿ ಹೋಗಿ ಏನೂ ತಿಳಿಯದಾಗಿ ಅಮ್ಮನನ್ನು ಅಪ್ಪಿಕೊಂಡು ಅಳಲಾರಂಬಿಸಿತು. ಅಲ್ಲಿಯವರೆಗೆ ಸುಮ್ಮನಿದ್ದ ಆಕೆಯ ಅತ್ತೆ ಸಂಧ್ಯಾಳ ಮಾತಿನ ಅರ್ತ ತಿಳಿದು ಮಾತೇ ಬರದಂತಾಗಿ ಸೊಸೆಯನ್ನು ರಮಿಸಲು ಒಳಹೋಗಿ ಆಕೆಯನ್ನು ಕರೆತಂದಳಂತೆ. ತಮ್ಮ ತಪ್ಪಿನ ಅರಿವಾದ ಆಕೆ ಹಾಗೂ ಆಕೆಯ ಗಂಡ ಕ್ಷಮೆ ಕೇಳಿ, ಒಳ್ಳೆಯ ನಿರ್ಧಾರಕ್ಕೆ ಬರುವುದಾಗಿ ಹೇಳಿ, ಉಡಿ ತುಂಬಿ ಬೀಳ್ಕೊಟ್ಟರಂತೆ.

ಇಷ್ಟು ಹೇಳಿ ವಿನೀತ್ ನಮ್ಮಿಬ್ಬರನ್ನೂ ಸೀಮಂತ ಕಾರ್ಯಕ್ಕೆ ಆಹ್ವಾನಿಸಿ, ನಿಮ್ಮಿಂದ ತುಂಬಾ ಸಹಾಯವಾಯಿತೆಂದೂ, ನಿನ್ನ ಬಿಡುವಿಲ್ಲದ ದಿನಚರಿ ಮದ್ಯೆಯೂ ಸಹಕರಿಸಿದ್ದಕ್ಕೆ ದನ್ಯವಾದ ತಿಳಿಸಿದ. ಏನೂ ಸಹಾಯ ಮಾಡದ ನನ್ನನ್ನು ಈತ ಅಬಿನಂದಿಸುವುದೇಕೆ? ಎಂದು ತಿಳಿಯದಾದೆ. ರಾತ್ರಿ ಸ್ಪೂರ್ತಿಯೊಂದಿಗೆ ಮಾತನಾಡುತ್ತಾ ವಿನೀತ್ ಹೇಳಿದ್ದೆಲ್ಲವನ್ನೂ ಹೇಳತೊಡಗಿದೆ. ಆದರೆ ಇವಳು ಮಾತ್ರ ಮೊಬೈಲ್ ಹಿಡಿದು ಆಗೀಗ ಸ್ಪಂದಿಸುತ್ತಾ ಕುಳಿತಿದ್ದಳು. ಎಲ್ಲವನ್ನೂ ಹೇಳಿಯಾದ ಮೇಲೆ ಸಂತೋಶದಿಂದ ಕುಪ್ಪಳಿಸತೊಡಗಿದಳು. ನಾನು ಗಾಬರಿಯಾಗಿದ್ದನ್ನು ನೋಡಿ, ನಗುತ್ತಾ, ತನ್ನ ವಾಟ್ಸ್ಆಪ್‌ನಲ್ಲಿ ಸಂಧ್ಯಾಳೊಂದಿಗೆ ಈ ವಿಶಯದ ಕುರಿತು ಚಾಟ್ ಮಾಡಿ ಸಮಸ್ಯೆಗೆ ಪರಿಹಾರ ನೀಡಿದ್ದನ್ನು ಹುರುಪಿನಿಂದ ತೋರಿಸಿದಳು. ಎಲ್ಲವನ್ನೂ ನೋಡಿದ ನಂತರ ಪ್ರತ್ಯಕ್ಶವಾಗಿ ಅಲ್ಲದಿದ್ದರೂ ಪರೋಕ್ಶವಾಗಿ ಸಹಾಯ ಮಾಡಿದ ನನಗೆ ವಿನೀತನ ಅಬಿನಂದನೆಗೆ ಕಾರಣ ತಿಳಿದು ನಿರಾಳವಾಗಿ, ಆಕೆಯನ್ನೇ ದಿಟ್ಟಿಸಿದೆ.

ಮರುದಿನ ವಿನೀತನ ಮನೆಗೆ ಹೋದಾಗ ಅಲ್ಲಿ ಆ ಕುಟುಂಬವೂ ಬಂದಿತ್ತು. ಸೀಮಂತ ಕಾರ್ಯ ಸಂಭ್ರಮದಿಂದ ಸಾಗಿತು. ನನ್ನ ಸ್ಫೂರ್ತಿಯ ಚಿಲುಮೆಯತ್ತ ನೋಡಿದೆ. ಎಂದಿನಂತೆ ಅವರಿವರೊಡನೆ ಮಾತನಾಡುತ್ತ, ನಗುಮೊಗದಿಂದ ಇದ್ದಳು. ಅವಳಿಗೇನಾದರೂ ಸರ್ಪ್ರೈಸ್ ನೀಡಬೇಕೆನಿಸಿ, ಮನೆಗೆ ಹಿಂದಿರುಗಿ "ಪೇಂಟಿಂಗ್ ಪ್ರದರ್ಶನ ಎಲ್ಲಿ, ಯಾವಾಗ ಮಾಡೋಣ" ಎಂದು ಕೇಳಿದೆ. ಆಶ್ಚರ್ಯಚಕಿತಳಾಗಿ ನನ್ನಾಕೆ ನನ್ನತ್ತ ತುಂಟ ನಗೆ ಬೀರಿದಳು.

# ಟೀ ಅಂಗಡಿ ಕಾಕಾ...

ವಿದ್ಯಾಭ್ಯಾಸಕ್ಕೆಂದು ನಗರಕ್ಕೆ ಬಂದ ಕಾಲೇಜು ವಿದ್ಯಾರ್ತಿಗಳ ಗುಂಪೊಂದು, ಕಾಕಾನ ಟೀ ಅಂಗಡಿಯನ್ನು ತಮ್ಮ ಕಾಯಂ ಅಡ್ಡವನ್ನಾಗಿ ಮಾಡಿಕೊಂಡಿತ್ತು. ಕಾಕಾನ ಹೆಂಡತಿ ಕೈಯ ಗರಂ ಗರಂ ರುಚಿಯಾದ ಬಜ್ಜಿ ಮತ್ತು ಕಾಕಾನ ಕೈಯ ಮಸಾಲಾ ಚಾಯ್ ಎಂದರೆ ಈ ಹುಡುಗರಿಗೆ ಪಂಚಪ್ರಾಣ. ಸಂಜೆಯಾಗುತ್ತಲೇ ಈ ಗೆಳೆಯರ ಬಳಗ ಇಲ್ಲಿ ಹಾಜರ್ ಇರುತ್ತಿತ್ತು, ಸ್ನೇಹಿತರು ಅವರಿಬ್ಬರನ್ನು ಆತ್ಮೀಯತೆಯಿಂದ ಕಾಕಾ, ಕಾಕಿ ಎಂದು ಕರೆಯುತ್ತಿದ್ದರು. ಅವರ ಆತ್ಮೀಯತೆ ಎಷ್ಟಿತ್ತೆಂದರೆ ಈ ಸ್ನೇಹಿತರ ಬಳಗ ಕೆಲವೊಮ್ಮೆ ದುಡ್ಡು ಕೊಡದೆ ಪರಾರಿಯಾಗಲು ಯತ್ನಿಸುತ್ತಿದ್ದರೂ ಕಾಕಾ ಕೋಪಗೊಳ್ಳದೆ ನಸುನಗುತ್ತಿದ್ದನು, ಕಾಕಿಯ ಒಂದೆರೆಡೇಟು ಎಲ್ಲರ ತಲೆ ಮೇಲೆ ಬೀಳುತ್ತಿದ್ದವು.

ಈ ಟೀ ಅಂಗಡಿ ಕಾಕಾಗೆ ಇವರಂತ ಒಬ್ಬ ಮಗನಿದ್ದ, ಕಾಕಾ ಯಾವಾಗಲು ತನ್ನ ಮಗನನ್ನು ಚೆನ್ನಾಗಿ ಓದಿಸಿ ಇಂಜಿನಿಯರ್ ಮಾಡಿಸುವೆನು ಎಂದು ಬಹಳ ಆಸೆಯಿಂದ ಹೇಳಿಕೊಳ್ಳುತ್ತಿದ್ದ. ತನ್ನ ಮಗನನ್ನು ಉತ್ತಮ ಹುದ್ದೆಯಲ್ಲಿ ನೋಡುವ ಮಹದಾಸೆ ಇತ್ತು ಅವನಿಗೆ. ಅದೇನೇ ಕಷ್ಟ ಬಂದರೂ ಮಗ ಚೆನ್ನಾಗಿ ಓದಲೆಂದು ಕೇಳಿದ್ದೆಲ್ಲವನ್ನೂ ಕೊಡಿಸುತ್ತಿದ್ದ. 2 ವರ್ಶವಾಯಿತು, ಸ್ನೇಹಿತರ ವಿದ್ಯಾಭ್ಯಾಸ ಪೂರ್ಣಗೊಂಡಿತ್ತು, ಈಗ ಎಲ್ಲ ಸ್ನೇಹಿತರು ತಮ್ಮ ಊರುಗಳಿಗೆ ವಾಪಸ್ಸಾಗುವ ಸಮಯ, ಈ 2 ವರ್ಶದಲ್ಲಿ ಟೀ ಅಂಗಡಿ ಕಾಕಾ ಕಾಕೀ ಜೊತೆ ಈ ಸ್ನೇಹಿತರ ಸಂಬಂದ ಅತಿ ಗಾಡವಾಗಿ ಬೆಳೆದಿತ್ತು. ಕೊನೆಯ ಬಾರಿಗೆ ಎಲ್ಲ ಸೇರಿ ಟೀ ಅಂಗಡಿಗೆ ಹೋಗಿ ಅವರನ್ನು ಆತ್ಮೀಯವಾಗಿ ಆಲಂಗಿಸಿ ದನ್ಯವಾದ ಹೇಳಿ ವಿದಾಯ ಹೇಳುವಷ್ಟರಲ್ಲಿ ಯಾರ ಕಣ್ಣಲ್ಲೂ ನೀರು ನಿಂತಿರಲಿಲ್ಲ... ಎಲ್ಲರ ಎದೆ ಬಾರವಾಗಿತ್ತು.

10 ವರ್ಶಗಳ ನಂತರ ಇದೇ ಸ್ನೇಹಿತರು ಮಾತಾಡಿಕೊಂಡು ತಮ್ಮ ಕಾಲೇಜಿನ ಬಳಿ ಸೇರಿದರು. ಕುಶಿಯಂದ ಸಂಬ್ರಮಿಸಿದರು. ಎಲ್ಲರು ಗೌರವಯುತ ಹುದ್ದೆಗಳನ್ನು ಪಡೆದಿದ್ದರು. ಮಾತು ಮಾತಿನಲ್ಲಿ ಅವರಿಗೆ ನೆನಪಾಗಿದ್ದು ಕಾಕಾನ ಟೀ ಅಂಗಡಿ, ಕೂಡಲೇ ತಮ್ಮ ಅಡ್ಡದ ಬಳಿ ಹೋದರೆ ಅಲ್ಲಿ ಯಾವ

ಕಾಕಾನ ಟೀ ಅಂಗಡಿಯೂ ಇರಲಿಲ್ಲ, ದೊಡ್ಡ ದೊಡ್ಡ ಮಾಲ್, ರೆಸ್ಟೋರೆಂಟ್‌ಗಳು ತಲೆ ಎತ್ತಿದ್ದವು.

ಹಂಗೊ ಹಿಂಗೋ ಅವರಿವರನ್ನು ಕೇಳಿ ಕಷ್ಟಪಟ್ಟು ಕಾಕಾನ ಮನೆ ಹುಡುಕಿದರು.

ಕಾಕಾನಿಗೆ ವಯಸ್ಸಾಗಿ, ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ, ಕಾಕಿ ತೀರಿಕೊಂಡು ವರ್ಷವಾಗಿತ್ತು. ಕಣ್ಣು ಮಸಕಾಗಿದ್ದ ಕಾರಣ ಇವರನ್ನೆಲ್ಲ ಕಷ್ಟಪಟ್ಟು ಗುರತು ಹಿಡಿದ ಕಾಕಾ. ಇವರನ್ನೆಲ್ಲ ನೋಡಿ ಅವನ ಕಣ್ಣಲ್ಲಿ ಆನಂದ ಬಾಷ್ಪ ಉರುಳಿದವು. ಅವನ ಮಗನ ಬಗ್ಗೆ ವಿಚಾರಿಸಿದಾಗ, ಅವನು ಹೆಂಡತಿಯೊಡನೆ ವಿದೇಶದಲ್ಲಿದ್ದಾನೆಂದು ತಿಳಿಯಿತು. ಕಾಕಾನ ಆರೋಗ್ಯ ತೀರ ಹದಗೆಟ್ಟಿತ್ತು, ಸ್ನೇಹಿತರೆಲ್ಲ ಸೇರಿ ಆಸ್ಪತ್ರೆಗೆ ಒಯ್ದರು. ಕಾಕಾ ಅವರೆನ್ನೆಲ್ಲ ಸಂತೋಶದಿಂದ ನೋಡುತ್ತ, ಕಣ್ಣೀರಿಡುತ್ತ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದ!

## ಪ್ರಾರ್ಥನೆ

ಹೇ ಹಂಸವಾಹಿನೀ ಜ್ಞಾನದಾಯಿನೀ
ಅಂಬವಿಮಲಮತೀ ದೇ
ಅಂಬವಿಮಲಮತೀ ದೇ
ಜಗಸಿರ್ ಮೌರ್ ಬನಯೇ ಭಾರತ್
ವಹ್ ಬಲ್ ವಿಕ್ರಮ್ ದೇ
ಅಂಬವಿಮಲಮತೀ ದೇ
ಲವ ಕುಶ ಧ್ರುವ ಪ್ರಹ್ಲಾದ್ ಬನೇ ಹಮ್
ಮಾನವತಾ ಕ ತ್ರಾಸ್ ಬನೇ ಹಮ್
ಸೀತಾ ಸಾವಿತ್ರಿ ದುರ್ಗ ಮಾ
ಫರ್ ಘರ್ ಘರ್ ಭರ್ ದೇ

ವಿನಯ.ಬಿ

ರಕ್ಷಿತ.ಎನ್

ಚೈತ್ರ.ಆರ್

ಮಂಜುಷ ರಾಣಿ.ಜಿ

## ನಾನೊಂದು ಮರವಾಗಿದ್ದರೆ

-ಮೂಡ್ನಕೂಡು ಚಿನ್ನಸ್ವಾಮಿ

*ನಾನೊಂದು ಮರವಾಗಿದ್ದರೆ*
*ಹಕ್ಕಿ ಗೂಡುಕಟ್ಟುವ ಮುನ್ನ*
*ಕೇಳುತ್ತಿರಲಿಲ್ಲ ನೀನು ಯಾವ ಕುಲ*
*ಬಿಸಿಲು ನನ್ನ ಅಪ್ಪಿಕೊಂಡಾಗ*
*ನೆರಳಿಗಾಗುತ್ತಿರಲಿಲ್ಲ ಮೈಲಿಗೆ*
*ತಂಬೆಲರ ಕೂಡ ಎಲೆಗಳ ಸ್ನೇಹ*
*ಮಧುರವಾಗಿರುತ್ತಿತ್ತು*
*ಮಳೆಹನಿಗಳು ನಾನು ಶ್ವಪಚನೆಂದು*
*ಹಿಂದೆ ಸರಿಯುತ್ತಿರಲಿಲ್ಲ. ನಾನು*
*ಬೇರೂರಿ ಕುಡಿಯಿಡುತ್ತಿರುವಾಗ ಭೂದೇವಿ*
*ಮಡಿ ಮಡಿ ಎಂದು ಓಡುತ್ತಿರಲಿಲ್ಲ.*
*ಪವಿತ್ರ ಗೋವು ನನ್ನ ತೊಗಟೆಗೆ ಮೈ ಉಜ್ಜಿ*
*ತುರಿಕೆ ತೀರಿಸಿಕೊಳ್ಳುವಾಗ ಅದರ ಅಂಗಾಂಗಳಲ್ಲಿ*
*ಅಡರಿಕೊಂಡ ಮುಕ್ಕೋಟಿ ದೇವತೆಗಳು*
*ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು*
*ಯಾರಿಗೆ ಗೊತ್ತು*
*ನನ್ನ ಅಂತ್ಯ ಕಾಲದಲ್ಲಿ*
*ಕಡಿದು ತುಂಡಾದ ಒಣ ಸೀಳೊಂದು*
*ಹೋಮಾಗ್ನಿಯಲ್ಲಿ ಬೆಂದು*
*ಪಾವನವಾಗುತ್ತಿತ್ತೇನೋ!*
*ಅಥವಾ*
*ಸತ್ಪುರುಷನೊಬ್ಬನ ಹೆಣಕ್ಕೆ ಚಟ್ಟವಾಗಿ*
*ನಾಲ್ಕು ಜನ ಸಜ್ಜನರ ಹೆಗಲೇರ ಬಹುದಿತ್ತೇ?*

# ರಾಷ್ಟ್ರ ವಂದನೆ

-ಕೆ.ಎಸ್.ನಿಸಾರ್ ಅಹಮ್ಮದ್

ದೇಶ ದೇವಿ ಉತ್ಸವದಲಿ,ಹಬ್ಬದೊಸಗೆ ಸಂಭ್ರಮದಲಿ
ಉತ್ಸಾಹದಿ ಪಾಲ್ಗೊಳ್ಳುತ ಧನ್ಯರಾಗಿರೆಲ್ಲರು,
ಭಕ್ತಿಯ ನೈವೇದ್ಯದಿಂದ,ಹೃದಯವೇದ್ಯ ಭಾವದಿಂದ
ಋಣವ ಸಲಿಸಿ ಮಾಣ್ಯರಾಗಲೆಂದು ಬನ್ನಿರೆಲ್ಲರು.

ಬುವಿಯ ಹೆಣ್ಣ ಪ್ರೀತಿ ಪೂರ್ಣ ಕರುಣೆ ಕಣ್ಣ ಮಣಿಯೆನಿಸಿದ
ಮಣ್ಣಿಗೆ ಚಿರ ಕೃತಜ್ಞ ನಮ್ಮ ನಿಮ್ಮ ಬಾಳುವೆ,
ಕವಿ ಬಣ್ಣನೆ ಮೀರಿದಂಥ ಇಹಪರಗಳ ಪುರುಷಾರ್ಥದ
ಚೆಲು ನಾಡಿಗೆ ಎಲ್ಲಿರುವುದು ಪೃಥ್ವಿಯಲ್ಲಿ ಹೋಲುವೆ?

ಹಿಮದ ಜಡೆಯ ಬಿಲ್ಲೆ ತಲೆಗೆ, ಕಡಲ ಕಾಲಕಡಗ ಕೆಳಗೆ,
ಗಿರಿ ನದಿ ವನ ಭೂನಂದನಭವಂದನ ಪಡೆವಳು,
ಅನುಗಾಲದ ದೇಹದುಡಿತ, ಶ್ರಮಿಕ ರೈತರೆದೆಯ  ತುಡಿತ
ಸುರಿವ ಅಮಿತ ಸೌಭಾಗ್ಯಕೆ ಹೆಬ್ಬಾಗಿಲ ತೆರೆವಳು.

ಅವಳಿಲ್ಲದ ದೇವರಿಲ್ಲ, ಅವಳು  ತೊರೆಯೆ ಕಾವರಿಲ್ಲ,
ಅವಳೆ ನಮ್ಮ ಬಾಳಿಗೆಲ್ಲ ಶಾಂತಿ ಸೌಖ್ಯ ಸಂಪದ,
ಎದೆಯ ಸವಿಯ ಹಾಲ ಕುಡಿಸಿ,ಹಕ್ಕಿಯಿಂಪ ವೀಣೆ ನುಡಿಸಿ
ಸಲಹುತಿರುವ ತಾಯ ಮನದಿ ನೆನೆಯುತಿರಲಿ ಜನಪದ.

ಹತ್ತು ಬಗೆಯ ಭಾವಗಳಿಗೆ,ಅತ್ತು ಕರೆವ ಜೀವಗಳಿಗೆ
ಸಂತೈಕೆಯ ತಂಪು ನೆರಳನಿತ್ತು ಪೊರೆವ ಹೆಮ್ಮರ,
ಮತಿಯನಿತ್ತು ಹರಸು ಮಾತೆ, ಬಿಸಿ ನೆತ್ತರ ಹೊಳೆ ಹರಿಸಿಹ,

ರಕ್ಷಿತ.ಎನ್

# ತಂಗಿ ಹುಟ್ಟಿದ್ದಳು

ತಂಗಿ ಹುಟ್ಟಿದ್ದಳು
ಸಂಭ್ರಮವಿಲ್ಲ, ಸಡಗರವಿಲ್ಲ
ಮನೆಯೊಳಗೆ ಸೂತಕದ ವಾತವರಣ
ಆಶೆಯಂತೆಯೆ
ಬತ್ತಿಹೋಗಿದೆ ಎದೆಹಾಲು
ಹಡೆದವ್ವ ಕೊರಗುವಳು
ಜೋಲಿ ಏರಿಸಲು
ಮೊಳೆಯೆ ಸಿಗಲೊಲ್ಲದು
ಅಪ್ಪ ಗೊಣಗುವನು
ಪೇಟೆಯಲ್ಲಿ ಮಿಠಾಯಿ
ಇದ್ದಕ್ಕಿದ್ದ ಹಾಗೆಯೆ ತುಟ್ಟಿಯಾಗಿದೆ
ಚಂದಮಾಡಿ ಪದಹಾಡುವ
ಅಜ್ಜಿಯ ಗಂಟಲೂ ಕಟ್ಟಿಹೋಗಿದೆ
ದೂರದಿಂದಲೇ ಶುಭಕೋರಿದ್ದಾರೆ
ಬಂಧುಗಳು
ಯಾರೊಬ್ಬರೂ ಸೂಚಿಸಿಲ್ಲ
ಮಗುವಿಗೆ ಹೆಸರು
ಹೋಗಲಿ ಬಿಡಿ.....
ಯಾರೋ ಸಮಾಧಾನ ಮಾಡುವರು
'ಸಾಕಮ್ಮ' 'ಸಾಕು' ಸಾಕು
ನಿಟ್ಟುಸಿರೇ ಹೆಸರಾಗಿ

ಮಗುವನು ಅಲಂಕರಿಸುವುದು
ನಿರಾಶೆ, ನಿರ್ಲಕ್ಷ್ಯ
ಹಸುಕಂದನಿಗೆ ಹೇಗೆ ಅರ್ಥವಾಗುವುದು
ನುಣ್ಣನೆಯ ಸಣ್ಣದನಿ
ಜಡಜಗತ್ತ ಭೇದಿಸುವುದು
ಹಿಡಿಯುಪ್ಪಿಟ್ಟಿರುವ ತಂಗಿಯನು
ಮುಡಿಯಪ್ಪಿಟ್ಟಿರುವ ಅಕ್ಕ
ಅಕ್ಕರೆಯಿಂದ ಅಪ್ಪುವಳು
ಅಭಯ ನೀಡುವಳು

ಸವಿತಾ ನಾಗಭೂಷಣ

# The Goose Girl

ഒരുപാട് വർഷങ്ങൾക്ക് മുഗ്രേറ്റ് ലാൻറല്ലെ രാജാവ് മരിച്ചുപോയി. തൻെറ രാജ്ഞിയേയും കുട്ടിയേയും തനിച്ചു വിട്ടുപോയി. അവിടെ ദേവതയും ഉണ്ടായിരുന്നു. അവർ ആ കുട്ടിയേയും രാജ്ഞിയേയും നല്ലത് പോലെ നോക്കിയിരുന്നു. ആ കുട്ടി വളരുന്തോറും രാജ്ഞിയായി മാറാൻ തുടങ്ങി. അവളുടെ ജീവിതം വളരെ നന്നായിപോയികൊണ്ടിരുന്നു. കാലങ്ങൻ കടന്നു പോയി. അവൻക്ക് സ്വയം വരത്തിന് സമയമായി. അവള യാത്രയക്കായി ഒരുങ്ങിയിന്നു തൻ മകള്ക്ക് വേണ്ടി സ്വർണ്ണങ്ങളും,വസ്ത്രങ്ങളും അമ്മ എടുത്തു വെച്ചു. “എൻ പൊന്നു മോളേ ഇത് നീ എടുത്തോണ്ടു പോകു. ഇതില്ല് വിലപിടിപ്പുള്ള സാധനങ്ങളുണ്ട്. നിൻ രാജാവിൻ കൂടെ നീ സന്തോഷമായിരിക്ക്.” എന്ന് രാജ്ഞി പറഞ്ഞു. കുടെ തുണയ്ക്കായി ഒരു ജോലിക്കാരിയേയും പറഞ്ഞു വിട്ടു. അവളാണ് രാജകുമാരിയെ വരണ്ട കയിൻ ഏൻപ്പിക്കേണ്ടത്. ഈ യാത്രയ്ക്കായി രണ്ടു പേർക്കും ഒരോ കുതിരയും ഉണ്ടായിരുന്നു. കുമാരിയുടെ കുതിര വനദേവത സമ്മാനമായിരുന്നു ആ കുതിരയുടെ പേരാണ് ഫെലോറ. അതിന് സംസാരിക്കാൻ കഴിയുമായിരുന്നു. “നീ ഒന്നു നിന്നേ നിൻ കയിൻ ഞാനൊരു സധനം തരാം എന്ന് പറഞ്ഞ് ദേവത തൻെറ മുടി കത്രിച്ചു കൊടുത്തു. ഇത് നീ സൂക്ഷിച്ച് വെച്ചോ ഇത് പോകുന്ന വഴിയിൽ നിനക്ക് ആവശ്വമായി വരും.”രാജകുമാരി അമ്മയോടും വനദേവതയോടും യാത്ര പറഞ്ഞു. മണികുറുളോളം യാത്ര ചയ്തതിന് ശേഷം രാജകുമാരിക്ക് ദാഹിക്കാൻ തുടങ്ങി രാജകുമാരി ജോലിക്കാരിയോട് പറഞ്ഞ. എനിക്ക് കുടിക്കാനൻ ഇത്തിരി വെള്ളം തെരുമോ. നിനക് അത്ര ദാഹമാണെകിൽ അടുത്തുള്ള പുഴയിൽ പോയി നീ തന്നെ വെള്ളം കുടിച്ചോ. എൻെറയ്യിൽ വെള്ളമില്ല എന്ന് ജോലിക്കാരി പറഞ്ഞു. ഇത് കേട്ട രാജകുമാരി താഴേക്കിറങ്ങിപോയി വെള്ളം കണ്ടതും വെള്ളം കോരിക്കുടിക്കാൻ തുടങ്ങി. പെട്ടെന്ന് ഒരാൾസംസാരിക്കാൻ തുടങ്ങി . രാജകുമാരി നിൻെറ അമ്മയുടെ മനസ്സ് എത്രത്തോളം വിഷമിക്കുന്നുണ്ടെന്ന് നിനക്കറിയുമോ എന്ന് ദേവതയുടെ മുടി ചോതിച്ചു. രാജകുമാരി അതിനൊന്നും മറുപടി പറയാതെ താൻ യത്ര ചെയ്ത കുതിരപ്പുറത്തു കയറിയിരുന്നു. മണിക്കുറുകളോളം യത്ര ചെയ്ത് വീണ്ടും ദാഹിക്കാൻ തുടങ്ങി. രാജകുമാരി ഇറങ്ങി വെള്ളം തുടിച്ചു. അവളുടെ പോക്കറ്റിലുണ്ടായിരുന്ന മുടി വെള്ളത്തിൽ വീണുപോയി. ഇതു കണ്ട വേലക്കാരി പറഞ്ഞു. നിനക്ക് ബലമില്ലാത്തവളായി പോയി എനി ഞാൻ പറയുന്നത് നീ കേൾക്ക് ഇല്ലെക്കിൽ നിന്നെ ഞാൻ എന്തു ചെയ്യുമെന്നറിയാമോ രാജകുമാരിയുടെ കുതിരയും ഉടുപ്പും വേലക്കാരി ദരിച്ചു. വേലക്കാരിയുടേത് രാജകുമാരിയും.വീണ്ടും യാത്ര ചെയ്ത് കൊട്ടാരത്തിൽ എത്തിചെർന്നു. രാജകുമാരൻ ജോലിക്കാരിയണ് കുമാരിയെന്ന് വിചാരിച്ച് അകത്തേക്ക് കുട്ടികൊണ്ട് പോയി. രാജകുമാരിക്ക് അരയന്നങ്ങളെ നോക്കാനുള്ള ജോലി കൊടുത്തു. ഫെലോറ ആരോടെക്കിലും സത്യം പറയുമെന്ന് ഭയന്ന് അതിനെ കൊല്ലാൻ ഭടമാരോട് കൽപ്പിക്കുകയും ചെയ്തു. ഫെലോറയുടെ തലയെ കുമാരിയുടെ നിർദ്ദേശപ്രകാരം കോട്ടയുടെ വതിൽക്കൽ വേച്ചു. പിറ്റേ ദിവസം രാവിലെ അതുവഴിയാണ് അരയന്നങ്ങളെ മേയ്ക്കാൻ പോയപ്പോൾ വളരെ ദുഃഖത്തോടെ ഫെലോറയോട് സംസാരിച്ചു. ഫെലേറോ.... എനിക്ക് നിങ്ങളെ സഹായിക്കാൻ പറ്റുന്നില്ല. രാജകുമാരി. നിൻെറ ഈ അവസ്ഥകണ്ടാൽ നിൻെറ അമ്മയ്ക്ക് ഒരുപാട് ദുഃഖമാകും അവരുടെ മനസ്സ് വേതനിച്ച് കരയാൻ തുടങ്ങും എന്ന് ഫെലോറയുടെ തല പറഞ്ഞു. നദിക്കരയിൽ വന്നയുടനെ ഒരു പാറയിലിരുന്നു അവളുടെ ഭംഗിയുള്ള മുടി അഴിച്ചു വെച്ചു അതിൽ വെള്ളിയിലകളുണ്ടായിരുന്നു. ആ കുട്ടി അതു കണ്ടയുടനെ ഓടിപ്പോയി അത് വലിച്ചെടുക്കാൻ ശ്രമിച്ചു. അപ്പോൾ രാജകുമാരി കരയാൻ തുടങ്ങി. “കാറ്റേ പെട്ടെന്ന് വിശ് ഇവൻെറ തൊപ്പി പറന്നുപോട്ടെ , കാറ്റേ വേഗം വിശ് ഇവൻെറ തൊപ്പി മലയുടെ മുകളിൽ ദുരേ പോട്ടെ ഇവൻ അതിൻെറ കുടെ പോട്ടേ , എൻെറ വെള്ളിതലമുടി അടിയ്ക്ക് വെയ്ക്കും വരെ ” എന്ന് പറഞ്ഞു തീർന്നില്ല കാറ്റ് വേഗത്തിൽ വീശുകയും ആ കുട്ടിയുടെ തൊപ്പി മലമുകളിലേക്ക് പറന്നു പോയി. അവൻെറ ആ തൊപ്പിയെടുക്കാനായി പിറകേ പോയി. അവൻ തിരിച്ചു വന്ന ശേഷം മുടി രാജകുമാരി കെട്ടിയിരുന്നു. ഇത് കണ്ട ആ കുട്ടിക്ക് വളരെ ദേശ്യം വന്നു. കുമാരിയോട് അവൻ ഒന്നും സംസാരിച്ചില്ല. വൈകുന്നേരം വരെ അവൻ അരയന്നങ്ങളെ മേയ്ച്ചു കൊണ്ടിരുന്നു. പിന്നെ വീട്ടിലേക്ക് പോയി, ഇത് പോലെ തന്നെ രണ്ടു ദിവസവും നടന്നു. ഒരു ദിവസം വൈകുന്നേരം ആ കുട്ടി രാജാവിനോട് ഈ കാര്യം അവതരിപ്പിക്കാൻ പോയി ,രാജാവേ..... എൻറ കുടയുള്ള പെൺകുട്ടിയുടെ കൂടെ എനിക്ക് അരയന്നങ്ങളെ മേയ്ക്കാൻ കഴിയില്ല. എപ്പോഴും അവൾ നല്ലത് ആവർത്തിക്കുന്നതിൽ എന്നെ കളിയാകുകയാണ് ജോക്കീ നീ മുഴുവനായും പറഞ്ഞിട്ടില്ല. എന്താണ് നടന്നതെന്ന് തെളിയിച്ചു പറ എന്ന് രാജാവ് പറഞ്ഞു. അതിനു ശേഷം രാജാവിനോട് അവൻ നടന്നതെല്ലാം പറഞ്ഞു.

നീ നിൻെറ ജോലി മാത്രം നോക്കിയാൽ മതി ഈ കാര്യങ്ങളെല്ലാം ഞാൻ നോക്കിക്കൊള്ളാം എന്ന് രാജാവ് പറഞ്ഞു. രാവിലെയായപ്പോൾ രാജാവ് കോട്ടവാതിലിനരികിൽ വന്നു. രാജകുമാരി ഫെലോറയോട് സംസാരിക്കുന്നതും, ഫെലോറയുടെ മറുപടിയും രാജാവ് കേട്ടു. രാജാവ് അവളെ പിന്തുടർന്ന് പോയി. അവിടെ യുണ്ടായിരുന്ന ചെടികളുടെ മറവിലിരുന്നു. കുമാരിയെ ശ്രദ്ധിച്ചു. കുട്ടി പറഞ്ഞതെല്ലാം രാജാവ് നേരിട്ട് കണ്ടു. ആരു മറിയാതെ രാജാവ് കൊട്ടരത്തിലേക്ക് വന്നു. വൈകീട്ട് അവരും കൊട്ടാരത്തിലെത്തി. ഉടനെ രാജാവ് അവളെ വിളിപ്പിച്ചു. അവൾ എന്തിനാണ് അങ്ങനെ ചെയ്തതെന്ന് രാജാവ് ചോദിച്ചു. രാജകുമാരി കരയാൻ ററതുടങ്ങി എന്നെ കൊണ്ട് ഇതൊന്നും പറയാൻ പറ്റുന്നില്ല അങ്ങനെ പറഞ്ഞാൽ എൻെറ ജീവിതം നശിച്ചുപോകും എന്ന് പറഞ്ഞു. രാജാവിൻെറ ഭീഷണിപ്രകാരം അവൾ നടന്നതെല്ലാം പറഞ്ഞു. നിനക്ക് ഒരു ബുദ്ധിമുട്ടും വരാതെ ഞാൻ നോക്കാം രാജകുമാരി. നിനക്കുണ്ടായ ബുദ്ധിമുട്ടുകളെല്ലാം ഞാൻ ശെരിയാക്കാം എനിമുതൽ നിനക്ക് ഇവിടെ രാജകുമാരിയായി ജീവിക്കാം. എന്ന് രാജാവ് പറഞ്ഞയുടനെ തന്നെ രാജകുമാരി ഭംഗിയുള്ളവളായി മാറി. രാജാവ് രാജകുമാരനോട് നടന്നതെല്ലാം തുറന്നു പറഞ്ഞു. യഥാർത്ത രാജകുമാരിയല്ല നിൻെറ യൊപ്പം ഉള്ളത് എന്നും പറഞ്ഞപ്പോൾ രാജകുമാരന് സന്തോഷമായി. ജോലിക്കാരി അറിയതെ രാജാവ് വലിയൊരു വിരുന്നൊരിക്കി. രാജകുമാരൻ ജോലിക്കാരിയോടൊപ്പം മറുഭാഗത്തും രാജകുമാരി മറുഭാഗത്തും ഇരിപ്പുണ്ടായിരുന്നു. എല്ലാവരും അവളുടെ സന്തര്യത്തിൽ അൽഭുതപ്പെട്ടുപോയി. അവളെ ആരും അറിഞ്ഞില്ലായിരുന്നു അരയന്നം മെയ്ക്കുന്ന പെണ്ണ്ണെന്ന്. എലാരും ഒരുമിച്ചിരുന്നു ഭക്ഷണം കഴിക്കാനിരുന്നപ്പോൾ രാജാവ് ഇതിനെകപറിച്ച് സംസാരിക്കാൻ തടങ്ങി. ഞാൻ നിങ്ങളോട് നല്ല കഥ പറയാൻ പോവുകയാണ് എല്ലാവരും ശ്രദ്ധിച്ച് കേൾക്കണം. രാജാവ് നടന്നതെല്ലാം തുറന്നു പറഞ്ഞു. പക്ഷേ അവർ ഈ കഥ മറ്റോരാൾ കേട്ടാൽ നന്നായിരിക്കുമെന്ന് കരുതി. അതുകൊണ്ട് ആ യഥത്ത്ര ജോലിക്കാരിയോട് ചോദിച്ചു. ഇങ്ങനെ നുണ പറയുന്നവളെ നീ എന്താണ് ചെയ്യുക എന്ന് രാജാവ് ചോദിച്ചു. അവളെ ജീവീത കാലം മുഴവനും ജയിലിലടക്കണം രാജാവ് അവളെ അതു പോലെ തന്നെ ചെയ്തു. നീ തന്നെ ഇത് പറഞ്ഞത് കൊണ്ട് അള് ക്ക് ശിക്ഷകൊടുക്കേണ്ടത് അതാവശമാണ് തൻെറ ജിവിതകാലം മുഴുവനും ജോലിക്കാരി ശക്ഷ അനുഭവിച്ചു. രാജകുമാരന് യഥാര്ത്ത രാജകുമാരിയെ കല്ല്യണം കഴിച്ചു. അതിനു ശേഷം ആ രാജകുടുബം സന്തോഷത്തോടെ ജീവിച്ചു. ദേവത അവളെ കണ്ടു. സത സന്തമായ ഫെലോറയ്ക്ക് ജീവന് നല്കി .